# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1183 |
| ಸದಸ್ಯರ ಹೆಸರು | : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 19.12.2024 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಆರಂಭದಿಂದ 95 ಕಿ.ಮೀ ವರೆಗಿನ ಆಧುನೀಕರಣ ಪ್ಯಾಕೇಜ್ ಕಾಮಗಾರಿ ಹಾಗೂ 1 ರಿಂದ 18 ರವರೆಗಿನ ಉಪ/ಸೀಳು ಕಾಲುವೆಗಳ ನಿರ್ಮಾಣ, ವಿಸ್ತರಣೆ ಮತ್ತು ನವೀಕರಣ ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿರುವ ಸಮಗ್ರ ವಿವರ ಒದಗಿಸುವುದು. | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ 0.00 ರಿಂದ 95.00 ರವರೆಗಿನ ಅಧುನೀಕರಣ ಪ್ಯಾಕೇಜ್ ಕಾಮಗಾರಿಗೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ರಚಿಸಲ್ಪಟ್ಟ ಸತ್ಯಶೋಧನಾ ಸಮಿತಿಯ ಶಿಫಾರಸ್ಸುಗಳನ್ವಯ ಹಾಗೂ ಸರ್ಕಾರದ ಆದೇಶ ಸಂ:ಜಸಂಇ 146 ಸೇಇವಿ 2020, ದಿನಾಂಕ:05.07.2021ರನ್ವಯ ಒಟ್ಟು ರೂ.42.785 ಕೋಟಿ ಮೊತ್ತವನ್ನು ಗುತ್ತಿಗೆದಾರರಾದ ಮೆ: ಡಿ. ವೈ. ಉಪ್ಪಾರ್& ಸನ್ಸ್‌ರವರಿಂದ ವಸೂಲಾತಿಯನ್ನು(recovery) ಈಗಾಗಲೇ ಮಾಡಲಾಗಿದೆ.<br><br>ಮಾನ್ಯ ಲೋಕಾಯುಕ್ತರು, ಕರ್ನಾಟಕ ಸರ್ಕಾರ ಇವರು ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ತನಿಖೆಯ ಪ್ರಕರಣವನ್ನು ದಿನಾಂಕ 10.01.2022 ರ ಅಂತಿಮ ಪರಿಶೀಲನಾ ವರದಿಯನ್ವಯ ಮುಕ್ತಾಯಗೊಳಿಸಲಾಗಿರುತ್ತದೆ.<br><br>ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಅಡ್ಡಲಾಗಿ ನಿರ್ಮಿಸಿರುವ 1 ರಿಂದ 15 ರವರೆಗಿನ ವಿತರಣಾ ಕಾಲುವೆ, ಉಪ / ಸೀಳು ಕಾಲುವೆಗಳ ಅಧುನೀಕರಣ ಪ್ಯಾಕೇಜ್–1 ಕಾಮಗಾರಿ ಹಾಗೂ 16 ರಿಂದ 18 ರವರೆಗಿನ ವಿತರಣಾ ಕಾಲುವೆ, ಉಪ / ಸೀಳು ಕಾಲುವೆಗಳ ಅಧುನೀಕರಣ ಪ್ಯಾಕೇಜ್–2 ಕಾಮಗಾರಿಗಳ ಮೇಲೆ ಮಾಡಿರುವ ಆಪಾದನೆಗಳಿಗೆ/ಆರೋಪಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದ ಸಂಖ್ಯೆ:ಜಸಂಇ 301 ಕೆಬಿಎನ್ 2023, ಬೆಂಗಳೂರು ದಿನಾಂಕ: 04.01.2024 ರನ್ವಯ ಈ ಹಿಂದೆ ರಚನೆಗೊಂಡ ತಾಂತ್ರಿಕ ತಜ್ಞರ ಸಮಿತಿಯಿಂದ ಹಿಂಪಡೆದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ. ಹೆಚ್.ಎನ್. ನಾಗಮೋಹನ್‌ದಾಸ್ ಇವರ ನೇತೃತ್ವದ ವಿಚಾರಣಾ ಆಯೋಗಕ್ಕೆ ವಹಿಸಿ ಅದೇಶಿಸಲಾಗಿದೆ. ಸದರಿ ಪ್ಯಾಕೇಜ್ ಕಾಮಗಾರಿಗಳ ತನಿಖೆಯು ವಿಚಾರಣಾ ಹಂತದಲ್ಲಿರುತ್ತದೆ. |
| ಆ) | ಸದರಿ ಕಾಮಗಾರಿಗಳಲ್ಲಿ ಒಟ್ಟು ಅಂದಾಜು ಮೊತ್ತ ಎಷ್ಟು; ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು ಹಾಗೂ ಹೊಣೆಗಾರರು ಯಾರು; (ಸಂಪೂರ್ಣ ಮಾಹಿತಿ ಒದಗಿಸುವುದು) | |
| ಇ) | ಈ ಕಾಮಗಾರಿಗೆ ಗುತ್ತಿಗೆ ನೀಡುವಾಗ ಟೆಂಡರ್ ಕರೆಯಲಾಗಿತ್ತೇ: ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು; ಅಂತಿಮವಾಗಿ ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿತ್ತು; ಅವರು ನಮೂದಿಸಿದ್ದ ಮೊತ್ತ ಎಷ್ಟು; (ಟೆಂಡರ್ ಕರೆಯಲಾದ ಜಾಹಿರಾತು ಪ್ರತಿಹಾಗೂ ಟೆಂಡರ್ ಅನುಮೋದನೆಗೊಂಡ ಕಡತಗಳ ಪ್ರತಿ ಒದಗಿಸುವುದು) | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಈ)</td><td>ಟೆಂಡರ್ ಪಡೆದಿದ್ದ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಬಿಲ್ ಪಾವತಿ ಮಾಡಲಾಗಿದೆಯೇ: ಅಕ್ರಮಗಳು ನಡೆದಿದ್ದರೂ ಬಿಲ್ ಪಾವತಿ ಮಾಡಲು ಕಾರಣಕರ್ತರು ಯಾರು; ಬಿಲ್ ಪಾವತಿಸುವಂತೆ ಸೂಚನೆ ನೀಡಿದ್ದು ಯಾರು (ಹಣ ಪಾವತಿಸುವಂತೆ ಆದೇಶ ಹೊರಡಿಸಲಾದ ಕಡತಗಳ ಪ್ರತಿ ಒದಗಿಸುವುದು)</td><td>
ದಿನಾಂಕ:28.09.2022 ರಂದು ಹಾಗೂ ದಿನಾಂಕ:09.02.2023 ರಂದು ನಡೆದ ಅಂದಾಜು ಸಮಿತಿ ಸಭೆಯಲ್ಲಿ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾಗಿರುವ ವಿತರಣಾ ಕಾಲುವೆ ಸಂಖ್ಯೆ 1 ರಿಂದ 15 ರವರೆಗಿನ ಪ್ಯಾಕೇಜ್-1 ಹಾಗೂ ವಿತರಣಾ ಕಾಲುವೆ ಸಂಖ್ಯೆ 16 ರಿಂದ 18 ರವರೆಗಿನ ಪ್ಯಾಕೇಜ್-2 ಕಾಮಗಾರಿಗಳ ಉಪ/ಸೀಳು ಕಾಲುವೆಗಳ ಅಧುನೀಕರಣ ಪ್ಯಾಕೇಜ್‌ಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಪಾವತಿಸಬೇಕಾಗಿರುವ ಬಿಲ್ಲುಗಳು ಬಾಕಿ ಇರುವ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಗುಣಮಟ್ಟದ ಕಾಮಗಾರಿಗೆ ಪೂರ್ಣ ಪ್ರಮಾಣದ ಬಿಲ್ಲನ್ನು ಪಾವತಿಸಬಹುದೆಂದು ನೀರಾವರಿ ಇಲಾಖೆಯ ಮುಖ್ಯಸ್ಥರಾದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಚಿಸಲಾಯಿತು. ಮುಂದುವರೆದು, ಬಾಕಿ ಉಳಿದಿರುವ ಬಿಲ್ಲಿನ ಮೊತ್ತವನ್ನು ಪಾವತಿಸುವ ಕುರಿತು ಸೂಕ್ತ ನಿರ್ದೇಶನವನ್ನು ನೀಡುವಂತೆ ಸರ್ಕಾರಕ್ಕೆ ಕೋರಲಾಗಿದ್ದ ಪ್ರಯುಕ್ತ, ಸರ್ಕಾರದ ಪತ್ರದಲ್ಲಿ "ಅಂದಾಜು ಸಮಿತಿಯು, ಮಾನ್ಯ ಲೋಕಾಯುಕ್ತ ಸಂಸ್ಥೆಯವರು ನೀಡುವ ವರದಿಯನ್ನು ಸಮಿತಿಗೆ ಒಪ್ಪಿಸುವಂತೆ ಸೂಚಿಸಲಾಗಿರುವ ಅಂಶಗಳು, ತಾಂತ್ರಿಕ ತಜ್ಞರ ಸಮಿತಿಯು ಸಲ್ಲಿಸಲಾಗುವ ವರದಿಯನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಗಳ ಪ್ರಗತಿಯ ಹಿತದೃಷ್ಟಿಯಿಂದ, ನಾರಾಯಣಪುರ ಬಲದಂಡೆ ಕಾಲುವೆ ಕಾಮಗಾರಿಯ ಪ್ಯಾಕೇಜ್ ಸಂ.1 ಡಿಸ್ಟ್ರಿಬ್ಯೂಟರಿ 1 ರಿಂದ 15 ರವರೆಗೆ ಹಾಗೂ ಪ್ಯಾಕೇಜ್ ಸಂ.2 ಡಿಸ್ಟ್ರಿಬ್ಯೂಟರಿ 16 ರಿಂದ 18 ರವರೆಗಿನ ಕಾಮಗಾರಿಗೆ ಸಂಬಂಧಿಸಿದಂತೆ, ಬಾಕಿ ಉಳಿದಿರುವ ಬಿಲ್ಲಿನ ಮೊತ್ತವನ್ನು ಪಾವತಿಸುವ ಕುರಿತು ನಿಯಮಾನುಸಾರ ಪರಿಶೀಲಿಸಿ ಅಗತ್ಯಕ್ರಮ ವಹಿಸುವಂತೆ" ನಿರ್ದೇಶಿಸಲಾಗಿದೆ.
ಸದರಿ ಪ್ಯಾಕೇಜ್ ಕಾಮಗಾರಿಗಳು ದಿನಾಂಕ:23.07.2021ರಂದು ಪ್ರಾರಂಭಗೊಂಡಿದ್ದು, ಇದುವರೆಗೂ ಪ್ಯಾಕೇಜ್ ಕಾಮಗಾರಿಗಳಿಗೆ ಪಾವತಿಸಲಾದ ಬಿಲ್ಲಿನ ಮೊತ್ತದ ವಿವರಗಳು ಕೆಳಗಿನಂತಿವೆ;
(ರೂ. ಕೋಟಿಗಳಲ್ಲಿ)
<table>
<tr><th>Name of the Work</th><th>Name of Agency</th><th>Agreement Amount (including GST)</th><th>Bill amount</th><th>Payment made</th><th>Amount with held</th></tr>
<tr><td>Package – 1 (1 to 15 Distry)</td><td>M/s N.D.Waddar& Company</td><td>977.51</td><td>867.66</td><td>590.10</td><td>277.56</td></tr>
<tr><td>Package – 2 (16 to 18 Distry)</td><td>M/s N.D.Waddar& Company</td><td>909.23</td><td>636.58</td><td>377.71</td><td>258.87</td></tr>
<tr><td>Total</td><td></td><td>1886.74</td><td>1504.24</td><td>967.81</td><td>536.43</td></tr>
</table>
ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಎಚ್.ಎನ್ ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗಕ್ಕೆ ವಹಿಸಿದ್ದು, ಆಯೋಗದ ವರದಿಯನ್ನು ನಿರೀಕ್ಷಣೆಯಲ್ಲಿದೆ.
ಈ ಮಧ್ಯೆ ಗುತ್ತಿಗೆದಾರರಾದ ಮೆ:ಎನ್.ಡಿ. ವಡ್ಡರ & ಕಂಪನಿ ಏಜನ್ಸಿಯವರು ತನ್ನ ಬಿಲ್ಲನ್ನು ತಡೆ ಹಿಡಿದಿರುವುದಕ್ಕೆ ಹಾಗೂ ಸರ್ಕಾರವು ದಿನಾಂಕ:25.08.2023ರಲ್ಲಿ ರಚಿಸಲಾದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ
</td></tr>
</table>

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಉ) | ಕಾಮಗಾರಿ ಕುರಿತು ಕರ್ನಾಟಕ ವಿಧಾನ ಮಂಡಲದ ಅಂದಾಜು ಸಮಿತಿ ನೀಡಿದ್ದ ಅಭಿಪ್ರಾಯವೇನು; (ಅಂದಾಜು ಸಮಿತಿ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದಿರುವ ಪತ್ರಗಳ ಪ್ರತಿ ಒದಗಿಸುವುದು) ಸಮಿತಿಯ ಅಭಿಪ್ರಾಯವನ್ನು ಮೀರಿ ಹಣ ಬಿಡುಗಡೆ ಮಾಡಿರುವವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು" (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಶ್ರೀ ಎಚ್.ಎನ್ ನಾಗಮೋಹನದಾಸ ವಿಚಾರಣಾ ಆಯೋಗವನ್ನು ರದ್ದು ಪಡಿಸುವಂತೆ ಕೋರಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯು ವಿಚಾರಣಾ ಹಂತದಲ್ಲಿರುತ್ತದೆ. |

ಸಂಖ್ಯೆ: ಜಸಂಇ 107 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1183 ಕ್ಕೆ ಮಾಹಿತಿಗಳು

(ರೂ. ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಯೋಜನೆ / ಕಾಮಗಾರಿಯ ಹೆಸರು | ಅನುಮೋದಿತ ಅಂದಾಜು ಮೊತ್ತ | ಟೆಂಡರ್ ಅಹ್ವಾನಿಸಿದ ದಿನಾಂಕ | ಟೆಂಡರ್ ಅಧಿಸೂಚನೆ ಪ್ರಕಟಗೊಂಡ ವಿವರಗಳು | ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್‌ದಾರರ ವಿವರ | ಟೆಂಡರ್‌ಗಿಟ್ಟ ಮೊತ್ತ | ಬಿಡ್‌ದಾರರು ನಮೂದಿಸಿದ ಟೆಂಡರ್ ಮೊತ್ತ | ಅನುಮೋದಿತ ಟೆಂಡರ್ ಮೊತ್ತ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ 0.00 ರಿಂದ 95.00 ರವರೆಗಿನ ಅಧುನೀಕರಣ ಕಾಮಗಾರಿ | 856.80 | 16.10.2019 | 1. ನ್ಯೂ ಇಂಡಿಯನ್ ಎಕ್ಸಪ್ರೆಸ್ ದೈನಂದಿನ ಆಂಗ್ಲ ಸಮಾಚಾರಪತ್ರಿಕೆ – 18.10.2019<br>2. ದಿ ಹಿಂದು ದೈನಂದಿನ ಆಂಗ್ಲ ಸಮಾಚಾರಪತ್ರಿಕೆ – 18.10.2019<br>3. ವಿಜಯ ಕರ್ನಾಟಕ ದೈನಂದಿನ ಕನ್ನಡ ಸಮಾಚಾರಪತ್ರಿಕೆ – 18.10.2019 | ಮೆ: ಡಿ. ವೈ. ಉಪ್ಪಾರ & ಸನ್ಸ್, ಪ್ರಥಮ ದರ್ಜೆ ಗುತ್ತಿಗೆದಾರರು, ಬೆಂಗಳೂರು | ರೂ.757.61 | ರೂ.985.32 | Rs.825.79 (excluding GST) at 9% above the amount put to tender |
| | | | | | ಮೆ: ಎ. ಡಿ. ಯು. ಇನ್‌ಫ್ರಾ, ಪ್ರಥಮ ದರ್ಜೆ ಗುತ್ತಿಗೆದಾರರು, ವಿಜಯಪುರ | | ರೂ.1012.56 | |
| 2 | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಅಡ್ಡಲಾಗಿ ನಿರ್ಮಿಸಿರುವ 1 ರಿಂದ 15 ರವರೆಗಿನ ವಿತರಣಾ ಕಾಲುವೆ, ಉಪ / ಸೀಳು ಕಾಲುವೆಗಳ ಅಧುನೀಕರಣ ಪ್ಯಾಕೇಜ್–1 ಕಾಮಗಾರಿ | 851.26 | 18.05.2021 | 1. ನ್ಯೂ ಇಂಡಿಯನ್ ಎಕ್ಸಪ್ರೆಸ್ ದೈನಂದಿನ ಆಂಗ್ಲ ಸಮಾಚಾರಪತ್ರಿಕೆ – 22.05.2021<br>2. ವಿಜಯ ಕರ್ನಾಟಕ ದೈನಂದಿನ ಕನ್ನಡ ಸಮಾಚಾರಪತ್ರಿಕೆ – 22.05.2021<br>3. ಪ್ರಜಾವಾಣಿ ದೈನಂದಿನ ಕನ್ನಡ ಸಮಾಚಾರಪತ್ರಿಕೆ – 22.05.2021 | 1. ಮೆ: ಎನ್. ಡಿ. ವಡ್ಡರ & ಕಂಪನಿ, ಪ್ರಥಮ ದರ್ಜೆ ಗುತ್ತಿಗೆದಾರರು, ಲಿಂಗಸಗೂರು | ರೂ.760.00 | ರೂ.915.19 | Rs.828.40 (excluding GST) at 9% above the amount put to tender |
| | | | | | 2. ಮೆ: ಡಿ. ವೈ. ಉಪ್ಪಾರ & ಸನ್ಸ್, ಪ್ರಥಮ ದರ್ಜೆ ಗುತ್ತಿಗೆದಾರರು, ಬೆಂಗಳೂರು | | ರೂ.957.6 | |
| 3 | ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಅಡ್ಡಲಾಗಿ ನಿರ್ಮಿಸಿರುವ 16 ರಿಂದ 18 ರವರೆಗಿನ ವಿತರಣಾ ಕಾಲುವೆ, ಉಪ / ಸೀಳು ಕಾಲುವೆಗಳ ಅಧುನೀಕರಣ ಪ್ಯಾಕೇಜ್–2 ಕಾಮಗಾರಿ | 791.76 | 18.05.2021 | 1. ಡೆಕನ್ ಹೆರಾಲ್ಡ್ ದೈನಂದಿನ ಆಂಗ್ಲ ಸಮಾಚಾರಪತ್ರಿಕೆ – 22.05.2021<br>2. ವಿಜಯವಾಣಿ ದೈನಂದಿನ ಕನ್ನಡ ಸಮಾಚಾರಪತ್ರಿಕೆ – 22.05.2021<br>3. ಹೊಸ ದಿಗಂತ ದೈನಂದಿನ ಕನ್ನಡ ಸಮಾಚಾರಪತ್ರಿಕೆ – 22.05.2021 | 1. ಮೆ: ಎನ್. ಡಿ. ವಡ್ಡರ & ಕಂಪನಿ, ಪ್ರಥಮ ದರ್ಜೆ ಗುತ್ತಿಗೆದಾರರು, ಲಿಂಗಸಗೂರು | ರೂ.706.91 | ರೂ.844.2 | Rs.770.53 (excluding GST) at 9% above the amount put to tender |
| | | | | | 2. ಮೆ: ಡಿ. ವೈ. ಉಪ್ಪಾರ & ಸನ್ಸ್, ಪ್ರಥಮ ದರ್ಜೆ ಗುತ್ತಿಗೆದಾರರು, ಬೆಂಗಳೂರು | | ರೂ.897.78 | |